**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 17/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.05**

**ದಿನಾಂಕಃ 07.03.2026** **ಸಿಡಬ್ಲ್ಯೂ.07**

| | |
|---|---|
| ಹೆಸರು | ಎಸ್ ವೀರೇಶಪ್ಪ |
| ತಂದೆ ಹೆಸರು | ಶೇಖರಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಸಿ ಹೆಚ್ ಸಿ 246 |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಸನ್ 2022 ರಿಂದ 2024 ರವರೆಗೆ ಸಿ ಪಿ ಸಿ ಆಗಿ ಮಲೆಬೆನ್ನೂರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 20.08.2023 ರಂದು ಈ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಚಾಸಾ.8 ರವರು ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ನನ್ನನ್ನು ತಮ್ಮೊಂದಿಗೆ ಕರೆದುಕೊಂಡು ನಿಟ್ಟೂರು ಗ್ರಾಮಕ್ಕೆ ಹೋಗಿದ್ದರು. ಸದರಿ ದಿನ ನಾನು ಚಾಸಾ.8 ರವರೊಂದಿಗೆ ನಿಟ್ಟೂರು ಗ್ರಾಮಕ್ಕೆ ಹೋಗಿದ್ದೆವು. ಸದರಿ ದಿನ ನಾನು ಚಾಸಾ.8 ಹಾಗೂ 6 ರವರು ಇಲಾಖಾ ವಾಹನದಲ್ಲಿ ಹೋಗಿದ್ದೆವು. ಚಾಸಾ.8 ರವರ ನಿರ್ದೇಶನದ ಮೇರೆಗೆ ನಿಟ್ಟೂರು ಗ್ರಾಮದ ಬಸ್ ನಿಲ್ದಾಣದಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ಪಂಚರಾಗಲು ಚಾಸಾ.8 ರವರು ನೀಡಿದ ನೋಟಿಸನ್ನು ನೀಡಿ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಚಾಸಾ.8 ರವರು ಮಾಧವಕೃಷ್ಣ ರವರ ಮನೆಯ ಮುಂದೆ ಚಾಸಾ.1 ರವರು ತೋರಿಸಿದ ಜಾಗೆಯಲ್ಲಿ ಬೆಳಿಗ್ಗೆ 11.00 ರಿಂದ 12.00 ಗಂಟೆವರೆಗೆ ಸ್ಥಳ ಪಂಚನಾಮೆ ಜರುಗಿಸಿದರು. ಸಾಕ್ಷಿಗೆ ನಿಪಿ.5 ನ್ನು ತೋರಿಸಲಾಗಿ ಅದು ಚಾಸಾ.8 ರವರು ಪಂಚರಿಗೆ ನೀಡಿದ ನೋಟಿಸ ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದೆ. ಪಂಚನಾಮೆ ಕಾಲಕ್ಕೆ ಕಚ್ಚಾ ನಕಾಶೆ ಮತ್ತು ಛಾಯ ಚಿತ್ರ ತೆಗೆದಿದ್ದು ಸದರಿ ಅವುಗಳನ್ನು ಈಗಾಗಲೇ ನಿಪಿ.3 ಮತ್ತು 4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಜಿ ಬಿ ವಕೀಲರಿಂದಃ**

ನಿಪಿ.2 ಪಂಚನಾಮೆಯಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಅದೇ ರೀತಿ ಕಚ್ಚಾ ನಕಾಶೆಗೂ ಸಹ ನನ್ನ ಸಹಿ ಇಲ್ಲ ಎಂದರೆ ಸರಿ. ನಿಪಿ.4 ರಲ್ಲಿ ನಾನು ಇಲ್ಲ ಎಂದರೆ ಸರಿ. ನಿಪಿ.2 ನ್ನು ಠಾಣೆಯಲ್ಲಿ ತಯಾರಿಸಿದ್ದು ನಾನು ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ